# ಪೊಲಿಟಿಕಲ್ ‘ಹನುಮ್ಯಾನ್’

ತೆಲುಗು ನಟ ತೇಜ ಸಜ್ಜ ಹಾಗೂ ನಿರ್ದೇಶಕ ಪ್ರಶಾಂತ್ ವರ್ಮಾ ಇಬ್ಬರ ವದನಾರವಿಂದಗಳಲ್ಲಿ ಸಂಭ್ರಮ ಕುಣಿಯುತ್ತಿತ್ತು. ಕೇಂದ್ರ ಗೃಹ ಸಚಿವ ಅಮಿತ್ ಶಾ ತಮ್ಮನ್ನು ಭೇಟಿ ಮಾಡಿದ್ದಕ್ಕೆ ಆ ಪಾಟಿ ಖುಷಿ. ‘ಹನುಮ್ಯಾನ್’ ತೆಲುಗು ಸಿನಿಮಾ ಹಿಟ್ ಆದ ಸಂತೋಷಕ್ಕೆ ಅಮಿತ್ ಭೇಟಿ ಕೊಸರು ಹಾಕಿದಂತೆ ಆಗಿದೆ.

ದಕ್ಷಿಣ ಭಾರತದಲ್ಲಿ ರಾಜಕೀಯವಾಗಿ ಗಿಡಗಳನ್ನು ನೆಟ್ಟು ಬೆಳೆಸುವ ಕೆಲಸವನ್ನು ಬಿಜೆಪಿ ಬಹಳ ವ್ಯವಸ್ಥಿತವಾಗಿ ಮಾಡುತ್ತಿದೆ. ಅಲ್ಲಿ ಇತ್ತೀಚೆಗಷ್ಟೇ ಎನ್‌ಡಿಎ ಮೈತ್ರಿಯ ಸೀಟು ಹಂಚಿಕೆ ಅಂತಿಮವಾಯಿತು. ಆ ಪ್ರಕ್ರಿಯೆ ನಡೆದ ಸಂದರ್ಭದಲ್ಲೇ ಅಮಿತ್ ಶಾ, ನಟ ಹಾಗೂ ನಿರ್ದೇಶಕನನ್ನು ಭೇಟಿ ಮಾಡಿದ್ದು.

ಅವರು ಸಿನಿಮಾ ನೋಡಿದ್ದರೋ ಇಲ್ಲವೋ ಎನ್ನುವುದು ತೇಜ ಅವರಿಗಾಗಲೀ, ಪ್ರಶಾಂತ್ ಅವರಿಗೆ ಆಗಲೀ ಸ್ಪಷ್ಟವಾಗಿ ತಿಳಿಯಲಿಲ್ಲ. ಅಮಿತ್ ಶಾ ಖುದ್ದು ಹನುಮ ಭಕ್ತರಾದದ್ದರಿಂದ ದಕ್ಷಿಣ ಭಾರತದ ಈ ಸಿನಿಮಾ ಮೇಲೆ ಆಸಕ್ತಿ ಮೂಡಿರಲಿಕ್ಕೂ ಸಾಕು.

ಅವರು ತೇಜ ಹಾಗೂ ಪ್ರಶಾಂತ್ ಇಬ್ಬರನ್ನೂ ಭೇಟಿ ಮಾಡಿ, ಹನುಮನ ಪುಟ್ಟ ಮೂರ್ತಿಯನ್ನು ಉಡುಗೊರೆಯಾಗಿ ಕೊಟ್ಟರು. ಹಾಗೆ ಕೊಡುವಾಗ ಫೋಟೊ ತೆಗೆಸಿದರು. ಆ ಫೋಟೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದರು.

ಭಾರತದ ಪುರಾಣ, ಸಂಪ್ರದಾಯವನ್ನು ಪುನರುಚ್ಚರಿಸುವ ಇಂತಹ ಸಿನಿಮಾಗಳು ಬರಬೇಕು. ನಮ್ಮ ಸೂಪರ್ ಹೀರೊಗಳನ್ನು ಜನರಿಗೆ ಪರಿಚಯಿಸಬೇಕು. ಇಂತಹ ಪ್ರಯತ್ನ ಹಿಟ್ ಆಗಿರುವುದು ಶ್ಲಾಘನೀಯ ಎಂದೂ ಅಮಿತ್ ಶಾ ಕೊಂಡಾಡಿ ತಮ್ಮ ಪೋಸ್ಟ್‌ನಲ್ಲಿ ಬರೆದರು.

ಅದನ್ನು ಓದಿಯೇ ತೇಜ ಹಾಗೂ ಪ್ರಶಾಂತ್ ಇಬ್ಬರೂ ಮೋಡದ ಮೇಲೆ ತೇಲುತ್ತಿರುವ ಅನುಭವ ತಮಗೆ ಆಗಿದೆ ಎಂದು ಹೇಳಿದ್ದು. ‘ಹನುಮ್ಯಾನ್’ ಚಿತ್ರದ ಮುಂದಿನ ಭಾಗದ ಸಿನಿಮಾ ಕೂಡ ಸೆಟ್ಟೇರಲಿದೆ.

‘ಹನುಮ್ಯಾನ್’ ಚಿತ್ರವು ಬಾಕ್ಸ್ ಆಫೀಸ್‌ನಲ್ಲಿ ₹250 ಕೋಟಿಗಿಂತಲೂ ಹೆಚ್ಚು ಹಣವನ್ನು ಕಲೆಹಾಕಿದೆ. ಮಹೇಶ್ ಬಾಬು ಅಭಿನಯಿಸಿರುವ ‘ಗುಂಟೂರು ಖಾರಂ’ ಸಿನಿಮಾ ಕೂಡ ಇದರ ಎದುರು ಮಂಕಾದದ್ದು ಚಿತ್ರಪಂಡಿತರಿಗೆ ಅಚ್ಚರಿಯ ಸಂಗತಿ. ■






# ತಾಪ್ಸಿ ಪಾರ್ಟಿ ಫಿಲಾಸಫಿ

ಮೊನ್ನೆ ಮೊನ್ನೆ ಅಂಬಾನಿ ಕುಟುಂಬದ ಕುಡಿಯ ಮದುವೆ ಸಮಾರಂಭದಲ್ಲಿ ದಿಗ್ಗಜ ನಟ–ನಟಿಯರು ಮಾಮೂಲಿ ಜನರಂತೆ ಭಾಗವಹಿಸಿದ್ದನ್ನು ಕಂಡೆವಷ್ಟೆ. ಆ ಸಮಾರಂಭಕ್ಕೆ ಹೋಗದ ಸಿನಿಮಾರಂಗದ ದೊಡ್ಡ ಹೆಸರುಗಳು ಯಾವುವು ಎಂದು ಕೂಡ ಕೆಲವು ಮಾಧ್ಯಮ ಸುದ್ದಿ ಮಾಡಿದವು. ತಾಪ್ಸಿ ಪನ್ನು ಅವರೂ ಆ ಪಟ್ಟಿಯಲ್ಲಿರುವ ಒಬ್ಬರು.

ತಾಪ್ಸಿ ಅವರನ್ನು ಸಂದರ್ಶನವೊಂದರಲ್ಲಿ ಪ್ರಶ್ನಿಸಿದಾಗ ಅವರು ಆಡಿದ ಮಾತು ಆಸಕ್ತಿಕರವಾಗಿದೆ, ಕೇಳಿ... ‘ನನಗೆ ಸಿನಿಮಾ ಪ್ರವೇಶಿಸಿದ ಮೊದಲ ದಿನಗಳಲ್ಲಿ ಕ್ಷುಲ್ಲಕ ಎನ್ನುವಂತಹ ಅನೇಕ ಸಲಹೆಗಳು ಬರುತ್ತಿದ್ದವು. ನೀನು ಪಾರ್ಟಿಗಳಿಗೆ ಹೋಗಬೇಕು. ಜನರ ಜೊತೆ ಬೆರೆಯಬೇಕು. ಆಗ ಅವಕಾಶಗಳು ಸಹಜವಾಗಿ ಹೆಚ್ಚು ಸಿಗುತ್ತವೆ ಎಂದು ಕೆಲವರು ಸಲಹೆ ಕೊಟ್ಟರು. ಆಗ ನಾನು ಮುಗ್ಧತೆಯಿಂದಲೇ ಆ ಸಲಹೆಯನ್ನು ಕೇಳಿಸಿಕೊಂಡಿದ್ದೆ. ಪಾರ್ಟಿಗಳಿಗೆ ಯಾರಾದರೂ ಕರೆಯಬೇಕಲ್ಲ, ಅದಕ್ಕೂ ಕೆಲವರು ವ್ಯವಸ್ಥೆ ಮಾಡಿದರು. ನನ್ನ ನಂಬರ್ ಅನ್ನು ಪಾರ್ಟಿ ಆಯೋಜನೆ ಮಾಡುವಂತಹವರಿಗೆ ಕಳುಹಿಸಿಕೊಟ್ಟರು. ನನಗೆ ಕರೆಗಳೂ ಬಂದವು. ತಮಾಷೆ ಏನೆಂದರೆ, ಕೆಲವು ದೊಡ್ಡ ನಟಿ–ನಟರಿಗೆ ನಾನು ಕರೆ ಮಾಡಿ, ಸಮಾರಂಭಕ್ಕೆ ಆಹ್ವಾನಿಸಬೇಕು ಎನ್ನುವುದು ಅವರ ಬೇಡಿಕೆಯಾಗಿತ್ತು. ಹಾಗೆ ಮಾಡುವಲ್ಲಿ ನಾನು ಯಶಸ್ವಿಯಾದರೆ ಪಾರ್ಟಿಗೆ ನನಗೂ ಪ್ರವೇಶ ಎನ್ನುವುದು ಷರತ್ತು. ಅದನ್ನು ಕೇಳಿ ನನಗೆ ಆಗ ನಗು ಬಂದಿತ್ತು. ನನ್ನ ಸ್ವಭಾವಕ್ಕೆ ವಿರುದ್ಧವಾಗಿ ವರ್ತಿಸುವುದು ಸಾಧ್ಯವಿರಲಿಲ್ಲ.

‘ಪಾರ್ಟಿಗೆ ಹೋಗುವುದರಲ್ಲಿ ನನಗೆ ಆಸಕ್ತಿ ಇರುವುದು ಎರಡು ಕಾರಣಕ್ಕೆ. ಒಂದು, ಪರಿಚಯಸ್ಥರ ಜೊತೆಗೆ ಹರಟುವುದು. ಇನ್ನೊಂದು, ಇಷ್ಟವಿರುವ ತಿನಿಸುಗಳನ್ನೆಲ್ಲ ತೃಪ್ತಿಯಾಗುವಷ್ಟು ತಿನ್ನುವುದು. ಯಾರದ್ದೋ ಅಪರಿಚಿತರ ಪಾರ್ಟಿಗೆ ಹೋಗಿ, ಏನೋ ಒಂದು ಮಾತನಾಡುವುದು ನನಗೆ ಆಗಿಬರುವುದಿಲ್ಲ. ಪರಿಚಯವೇ ಇರದವರ ಜೊತೆಗೆ ಏನೆಂದು ಮಾತನಾಡುವುದು? ಅಲ್ಲದೆ ರಾತ್ರಿ 10 ಗಂಟೆಯ ನಂತರ ನನಗೆ ಎಲ್ಲೂ ಇರಲು ಸಾಧ್ಯವಿಲ್ಲ. ಮನೆಗೆ ತೆರಳಿ ಬೇಗ ಮಲಗಬೇಕು ಎಂದು ದೇಹ ಬಯಸುತ್ತದೆ. ಬೆಳಿಗ್ಗೆ ನಿತ್ಯವೂ ಬೇಗ ಏಳುವುದು ನನ್ನ ಜಾಯಮಾನ.

‘ಮೇಲಾಗಿ, ನಾನು ಸಿಗರೇಟು ಸೇದುವುದಿಲ್ಲ, ಮದ್ಯಪಾನ ಮಾಡುವುದಿಲ್ಲ. ಇಂತಹ ಅಭ್ಯಾಸಗಳು ಇಲ್ಲದೇ ಇದ್ದಮೇಲೆ ಪಾರ್ಟಿಗಳಿಗೆ ಹೋಗಿ ಮಾಡುವುದಾದರೂ ಏನನ್ನು? ಹೀಗಾಗಿ ನಾನು ಮೊದಲಿನಿಂದಲೂ ಪಾರ್ಟಿಗಳಿಂದ ದೂರ ಉಳಿದೆ. ಅದೇ ಕಾರಣಕ್ಕೆ ನನ್ನನ್ನು ಆಹ್ವಾನಿಸುವ ಪ್ರಶ್ನೆಯೇ ಯಾರಿಗೂ ಬರಲಿಲ್ಲ.’

ತಾಪ್ಸಿ ಪನ್ನು ಅವರು ಅಂಬಾನಿ ಕುಟುಂಬದ ಸಮಾರಂಭದ ಕುರಿತು ಬೇರೆ ಏನನ್ನೂ ಹೇಳಲಿಲ್ಲ. ತಾವು ಸದಾ ಕಾಲ ಇಂತಹ ಪಾರ್ಟಿಗಳಿಂದ ದೂರವಷ್ಟೆ ಎನ್ನುವುದನ್ನು ಕೇಂದ್ರೀಕರಿಸಿ ಮಾತ್ರ ಅವರು ಮಾತನಾಡಿದ್ದು ಅವರ ವೃತ್ತಿಪರತೆಗೆ ಹಿಡಿದ ಕನ್ನಡಿ. ■